## ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಗೋವಿಂದರಾಜು ಇವರು ಗಮನ ಸೆಳೆಯುವ ಸೂಚನೆಯ 72 ರಡಿ ಕೋಲಾರ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳೇ ಅನಾರೋಗ್ಯ ಪೀಡಿತವಾಗಿದ್ದು, ಮೂಲಸೌಕರ್ಯಗಳಿಲ್ಲದೆ ಸೇವೆ ಕಲ್ಪಿಸುವ ತೀವ್ರ ಸಂಕಷ್ಟ ಎದುರಿಸುತ್ತಿವೆ. ಜಿಲ್ಲೆಯಲ್ಲಿ 2 ಜಿಲ್ಲಾಸ್ಪತ್ರೆ, 5 ಸಾರ್ವಜನಿಕರ ಆಸ್ಪತ್ರೆ, 2 ಸಮುದಾಯ ಆರೋಗ್ಯ ಕೇಂದ್ರಗಳು, 72 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 302 ಉಪ ಕೇಂದ್ರಗಳು, 72 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 302 ಉಪ ಕೇಂದ್ರಗಳು ಹಾಗೂ 24x7 ಕೆಲಸ ಮಾಡುವ 42 ಆಸ್ಪತ್ರೆಗಳಿವೆ. ಆದರೆ ಸಮರ್ಪಕ ಸೌಲಭ್ಯ ಇಲ್ಲದ ಕಾರಣ ಸಾರ್ವಜನಿಕರಿಗೆ ಸಕಾಲಕ್ಕೆ ಆರೋಗ್ಯ ಸೇವೆ ದೊರೆಯುತ್ತಿಲ್ಲ. ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಕಲ್ಪಿಸಬೇಕು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತರುತ್ತಿವೆ. ಆದರೆ ಅಧಿಕಾರಿಗಳಲ್ಲಿ ಬದ್ಧತೆ ಕೊರತೆಯಿಂದ ಸಮರ್ಪಕ ಸೌಲಭ್ಯಗಳಿಂದ ವಂಚಿತವಾಗಿದ್ದು, ರೋಗಿಗಳಿಗೂ ಸಮರ್ಪಕ ಸೇವೆ ಸಿಗದಂತಾಗಿದೆ ಎಂಬ ಬಗ್ಗೆ:**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

*******

ಕೋಲಾರ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡಲು ಈ ಕೆಳಕಂಡ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ಆಸ್ಪತ್ರೆಗಳಲ್ಲಿ ಸಮಪರ್ಕವಾಗಿ ಆರೋಗ್ಯ ಸೇವೆಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.

1. ಜಿಲ್ಲಾ ಮಟ್ಟದ ಆಸ್ಪತ್ರೆಗಳ ಸಂಖ್ಯೆ-01
2. ಸಾರ್ವಜನಿಕರ ಆಸ್ಪತ್ರೆಗಳ ಸಂಖ್ಯೆ-05
3. ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ:-04
4. 24x7 ಆಸ್ಪತ್ರೆ ಒಳಗೊಂಡಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ:-64
5. ಉಪ ಕೇಂದ್ರಗಳ ಸಂಖ್ಯೆ:-290

ಕೋಲಾರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರವನ್ನು **ಅನುಬಂಧ-1 & 2 ರಲ್ಲಿ ನೀಡಲಾಗಿದೆ.**

**ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಕೆಳಕಂಡ ಯೋಜನೆಗಳು ಅನುಷ್ಠಾನಗೊಂಡಿವೆ.**

1. **ಜನನಿ ಸುರಕ್ಷಾ ಯೋಜನಾ:**

ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ ಮಾಡಿಸಿಕೊಂಡಿದ್ದಲ್ಲಿ BPL ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಹೆರಿಗೆಯಾದ ಕೂಡಲೇ ರೂ.600/700 ಗಳನ್ನು ನೇರ ನಗದು ವರ್ಗಾವಣೆ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ನೀಡಲಾಗುತ್ತಿದೆ.

2. **ಜನನಿ ಶಿಶು ಸುರಕ್ಷಾ ಕಾರ್ಯಕ್ರಮ:**

ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಎಲ್ಲಾ ವರ್ಗದ ಗರ್ಭಿಣಿಯರಿಗೆ (APL/BPL) ಉಚಿತವಾಗಿ ವೈದ್ಯಕೀಯತಪಾಸಣೆ, ಪ್ರಯೋಗಾಲಯ ಪರೀಕ್ಷೆಗಳು, ಔಷದೋಪಚಾರಗಳು, ಹೆರಿಗೆ ಸಮಯದಲ್ಲಿ ಊಟದ ವ್ಯವಸ್ಥೆ (ಸಾಮಾನ್ಯ ಹೆರಿಗೆಗೆ 3ದಿನ, ಸಿಜೇರಿಯನ್ ಹೆರಿಗೆಗೆ 7 ದಿನ) ಮತ್ತು ಹೆರಿಗೆ ಸಮಯದಲ್ಲಿ ಮತ್ತು ಹೆರಿಗೆಯ ನಂತರ ಸಾರಿಗೆ ವ್ಯವಸ್ಥೆ.

3. **ಸುಮನ್ ಕಾರ್ಯಕ್ರಮ:**

ಕೋಲಾರ ಜಿಲ್ಲೆಯಲ್ಲಿ 111 ಸರ್ಕಾರಿ ಆರೋಗ್ಯ ಸಂಸ್ಥೆಗಳನ್ನು ಸುಮನ್ ಕಾರ್ಯಕ್ರಮದಡಿಯಲ್ಲಿ ನೋಟಿಫೈ ಮಾಡಲಾಗಿರುತ್ತದೆ.

4. **ಪ್ರಧಾನ ಮಂತ್ರಿ ಸುರಕ್ಷಿತ್ ಮಾತೃತ್ವಅಭಿಯಾನ (PMSMA):**

ಕೋಲಾರ ಜಿಲ್ಲೆಯಲ್ಲಿ ಒಟ್ಟು 25 ಖಾಸಗಿ ವೈದ್ಯರುಗಳು PMSMA ಕಾರ್ಯಕ್ರಮದಡಿಯಲ್ಲಿ ಗರ್ಭಿಣಿ ಸೇವೆಗಳನ್ನು ನೀಡಲು PMSMA portal ನಲ್ಲಿ register ಆಗಿರುತ್ತಾರೆ.

ವಿಸ್ತೃತ PMSMA: ಪ್ರತಿ ತಿಂಗಳು 24 ನೇ ತಾರೀಖಿನಂದು ನಡೆಸಲಾಗುವುದು.

5. **ಲಕ್ಷ್ಯ ಕಾರ್ಯಕ್ರಮ:**

SNR ಕೋಲಾರ, ಕೆ.ಜಿ.ಎಫ್ ನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮತ್ತು ಮುಳಬಾಗಿಲು ಇಲ್ಲಿ ಲಕ್ಷ್ಯ ಕಾರ್ಯಕ್ರಮ ಅನುಷ್ಠಾನಗೊಂಡಿರುತ್ತದೆ ಮತ್ತು ರಾಷ್ಟ್ರ ಮಟ್ಟದಿಂದ ಪ್ರಾಮಾಣೀಕರಣಗೊಂಡಿರುತ್ತದೆ.

6. **HDU/ICU ಘಟಕಗಳ ಸ್ಥಾಪನೆ:** ಈ ಕಾರ್ಯಕ್ರಮವು ಹೆರಿಗೆ ಕೋಣೆ, ಶಸ್ತ್ರಚಿಕಿತ್ಸಾ ಕೊಠಡಿಗಳ ಮತ್ತು ಪ್ರಸೂತಿ ತೀವ್ರ ನಿಗಾ ಘಟಕಗಳಲ್ಲಿ (ICU) ಗರ್ಭಿಣಿಯರ ಆರೈಕೆಯ ಗುಣಮಟ್ಟವನ್ನು ಸುಧಾರಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ SNR ಆಸ್ಪತ್ರೆ ಕೋಲಾರದಲ್ಲಿ HDU/ICU ಘಟಕವನ್ನು ಸ್ಥಾಪಿಸಲಾಗಿರುತ್ತದೆ.
7. **ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ಸ್ಥಾಪನೆ.**

ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ನಿರ್ಮಿಸಲಾಗಿದ್ದು ಇದರಿಂದ ಗರ್ಭಿಣಿ, ಬಾಣಂತಿಯರಿಗೆ ಆರೈಕೆಯ ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

- ಕೆ.ಜಿ.ಎಫ್ ಕೋಲಾರ
- SNR ಕೋಲಾರ ಈ 2 ಸ್ಥಳಗಳಲ್ಲಿ 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಲಾಗಿರುತ್ತದೆ.

**ಅಸಾಂಕ್ರಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮ (ಎನ್.ಸಿ.ಡಿ)**

**NP-NCD: National Programme Non-Communicable Disease: ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ರಾಷ್ಟ್ರೀಯ ನಿಯಂತ್ರಣ ಕಾರ್ಯಕ್ರಮ:**

- 30 ವರ್ಷ ಮತ್ತು ಮೇಲ್ಪಟ್ಟ ಹೆಚ್ಚಿನ ವಯಸ್ಸಿನವರಿಗೆ ರಕ್ತದೊತ್ತಡ, ಮಧುಮೇಹ, 03 ಸಾಮಾನ್ಯ ಕ್ಯಾನ್ಸರ್‌ಗಳಾದ ಬಾಯಿ, ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಗಳ ಸಮಗ್ರ ತಪಾಸಣೆ, ನಿರ್ವಹಣೆ ಮತ್ತು ಔಷಧಿಗಳ ವಿತರಣೆಯನ್ನು ಉಚಿತವಾಗಿ ನೀಡಲಾಗುತ್ತಿದೆ.

1. **ಗೃಹ ಆರೋಗ್ಯ :-**

- ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ರಾಷ್ಟ್ರೀಯ ನಿಯಂತ್ರಣ ಕಾರ್ಯಕ್ರಮದ (NP-NCD) ಅಡಿಯಲ್ಲಿ "ಗೃಹ ಆರೋಗ್ಯ" ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ರಾಜ್ಯದಾದ್ಯಂತ, ಏಪ್ರಿಲ್ 2025 ರ ನಂತರ ವಿಸ್ತರಿಸಲಾಗುವುದು.

**Gruha Arogya Pilot Project at Kolar District**

ಸಲಕರಣೆಗಳು/ ಸಾಮಗ್ರಿಗಳು ಹಾಗೂ ಇತರೆ ಪರಿಕರಗಳನ್ನು ಪೂರೈಸಲು ಬೇಡಿಕೆ ಪಟ್ಟಿಯನ್ನು ಆರೋಗ್ಯ ಸಂಸ್ಥೆಗಳಿಂದಲೇ ನೇರವಾಗಿ ಪಡೆದು, ಖರೀದಿಸಿ ಸರಬರಾಜು ಮಾಡಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಸಮರ್ಪಕವಾಗಿ ಆರೋಗ್ಯ ಸೇವೆ ಲಭ್ಯವಾಗುವ ನಿಟ್ಟಿನಲ್ಲಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

**ಆಕುಕ 7 ಎಸ್ ಬಿವಿ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ**

**ಕಲ್ಯಾಣ ಸಚಿವರು**